# ತುಮಕೂರು ವಿಶ್ವವಿದ್ಯಾನಿಲಯ

## ಸ್ನಾತಕ ಪದವಿ ಪುರುಷರ (ಪಾವತಿ) ವಿದ್ಯಾರ್ಥಿನಿಲಯ

ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ಬಿ. ಹೆಚ್. ರಸ್ತೆ, ತುಮಕೂರು

---

## ವಿದ್ಯಾರ್ಥಿಗಳ ಗಮನಕ್ಕೆ

ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ಪುರುಷರ (ಪಾವತಿ) ವಿದ್ಯಾರ್ಥಿನಿಲಯದ 2023–24ನೇ ಸಾಲಿನ ಪ್ರವೇಶಾತಿ ಪ್ರಾರಂಭವಾಗಿರುತ್ತದೆ. ದಿನಾಂಕ 03–10–2023 ರಿಂದ ಪದವಿ ತರಗತಿಗಳು ಪ್ರಾರಂಭವಾಗುವುದರಿಂದ, ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯದ ಸದುಪಯೋಗ ಪಡೆಯಬೇಕೆಂದು ಕೋರಲಾಗಿದೆ. ವಿದ್ಯಾರ್ಥಿನಿಲಯಕ್ಕೆ ಅರ್ಜಿ ಸಲ್ಲಿಸಲು ಅವಶ್ಯಕವಿರುವ ಮಾಹಿತಿಯನ್ನು ಹಾಗೂ ಅರ್ಜಿಯ ಪ್ರತಿಯನ್ನು ಲಗತ್ತಿಸಲಾಗಿದೆ.

ಈ ಹಿಂದೆ ವಿದ್ಯಾರ್ಥಿನಿಲಯದಲ್ಲಿ ವಾಸವಿರುವ ವಿದ್ಯಾರ್ಥಿಗಳು ಹಿಂದಿನ ವರ್ಷದ ಸಂಪೂರ್ಣ ಶುಲ್ಕವನ್ನು ಪಾವತಿ ಮಾಡಿದ ನಂತರ ಮಾತ್ರ ಅವರ ಅರ್ಜಿಗಳುನ್ನು ಸ್ವೀಕರಿಸಲಾಗುವುದು.

ಅರ್ಜಿ ಶುಲ್ಕ ಹಾಗೂ ಪ್ರವೇಶ ಶುಲ್ಕದ ವಿವರಗಳನ್ನು ಲಗತ್ತಿಸಿರುವ ಮಾಹಿತಿಯಲ್ಲಿ ನೀಡಲಾಗಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ವಿದ್ಯಾರ್ಥಿನಿಲಯದ ಕಚೇರಿಯನ್ನು ಸಂಪರ್ಕಿಸಲು ಕೋರಿದೆ.

ಸಂಪರ್ಕ ಸಂಖ್ಯೆಗಳು: Mr. Sharan M. S. – 9986177735

Dr. Chethan Prathap K. N. – 9686245523

Chethan Prathap K

ನಿಲಯಪಾಲಕರು

ನಿಲಯಪಾಲಕರು
ಸ್ನಾತಕ ಪುರುಷರ ವಿದ್ಯಾರ್ಥಿನಿಲಯ (ಪಾವತಿ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು-572103

**2023–24 ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿನಿಲಯದ ಪ್ರವೇಶಾತಿ ಸೂಚನೆಗಳು**

1. ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ಪುರುಷರ (ಪಾವತಿ) ವಿದ್ಯಾರ್ಥಿನಿಲಯಕ್ಕೆ ಸೇರಬಯಸುವ ಆಸಕ್ತ ವಿದ್ಯಾರ್ಥಿಗಳು ಮೊದಲಿಗೆ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ವಿಶ್ವವಿದ್ಯಾನಿಲಯ ಕಲಾ ಕಾಲೇಜು ಅಥವಾ ವಿಶ್ವವಿದ್ಯಾನಿಲಯದ ಯಾವುದಾದರು ಸ್ನಾತಕೋತ್ತರ ವಿಭಾಗದಲ್ಲಿ ಪ್ರವೇಶಾತಿ ಪ್ರಕ್ರಿಯೆಯನ್ನು ಪೂರೈಸಿಕೊಂಡಿರಬೇಕು.
2. ಸ್ನಾತಕ ಪದವಿ ಪುರುಷರ (ಪಾವತಿ) ವಿದ್ಯಾರ್ಥಿನಿಲಯದ ಅರ್ಜಿಯನ್ನು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಅಂತರ್ಜಾಲ ತಾಣವಾದ www.ucst.ac.in ಇಂದ ಪಡೆದುಕೊಳ್ಳಬಹುದು. ಸದರಿ ಅರ್ಜಿಯನ್ನು ಮುದ್ರಿಸಿಕೊಂಡು, ಅದರಲ್ಲಿ ಕೋರಿರುವ ಎಲ್ಲಾ ಮಾಹಿತಿಯನ್ನು ಭರ್ತಿಮಾಡಿ, ತಾವು ಪ್ರವೇಶಾತಿ ಪಡೆದ ಕಾಲೇಜಿನ ಪ್ರಾಂಶುಪಾಲರಿಂದ ಪ್ರವೇಶಾತಿ ದೃಢೀಕರಣವನ್ನು ಅರ್ಜಿಯ ಜೊತೆಗೆ ನೀಡಿರುವ ನಿಗದಿತ ನಮೂನೆಯಲ್ಲಿ ಪಡೆದುಕೊಳ್ಳತಕ್ಕದ್ದು.
3. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ಇವರ ಹೆಸರಿಗೆ ಆನ್ ಲೈನ್ ನಲ್ಲಿ SBI collect ನ ಮೂಲಕ ರೂ. 100/– (ಕೇವಲ ಒಂದು ನೂರು ರೂಪಾಯಿಗಳು ಮಾತ್ರ) ವನ್ನು ಪಾವತಿಸಿ ಅದರ ರಶೀತಿ ಸಂಖ್ಯೆಯನ್ನು ಅರ್ಜಿಯಲ್ಲಿ ಭರ್ತಿ ಮಾಡುವುದು ಹಾಗೂ ಅದರ ನಕಲನ್ನು ಅರ್ಜಿಯ ಜೊತೆಗೆ ಲಗತ್ತಿಸುವುದು. ಅರ್ಜಿ ಶುಲ್ಕವನ್ನು ಕೆಳಗೆ ನೀಡಿರುವ ಲಿಂಕನ್ನು ಉಪಯೋಗಿಸಿ ಪಾವತಿಸಬಹುದು.
4. https://www.onlinesbi.sbi/sbicollect/icollecthome.htm?corpID=3892759
5. ಹಾಗೆ ಪಾವತಿಸುವ ಸಂದರ್ಭದಲ್ಲಿ ನೊಂದಣಿ ಸಂಖ್ಯೆ (register no.) ದೊರೆಯದ ವಿದ್ಯಾರ್ಥಿಗಳು ತಮ್ಮ ಹಿಂದಿನ ವಿದ್ಯಾಭ್ಯಾಸದ ನೊಂದಣಿ ಸಂಖ್ಯೆಯನ್ನು ನೀಡುವುದು. ವಿಶ್ವವಿದ್ಯಾನಿಲಯ ಕಲಾ ಕಾಲೇಜಿಗೆ ಅಥವಾ ಸ್ನಾತಕೋತ್ತರ ವಿಭಾಗಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ತಮ್ಮ ಕೋರ್ಸ್ ಆಯ್ಕೆ ಮಾಡಿಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ, ಅಲ್ಲಿ ತೋರಿಸುವ ಯಾವುದಾದರು ಕೋರ್ಸ್ ಅನ್ನು ಆಯ್ಕೆ ಮಾಡಿಕೊಂಡು ನಂತರ ವಿದ್ಯಾರ್ಥಿನಿಲಯಕ್ಕೆ ಸಲ್ಲಿಸುವ ರಶೀತಿಯಲ್ಲಿ ತಮ್ಮ ಕೋರ್ಸ್ ನ್ನು ಬರೆದು ಕೊಡುವುದು. REMARKS ಜಾಗದಲ್ಲಿ Hostel Application Fee ಎಂದು ಭರ್ತಿ ಮಾಡುವುದು.
6. ಅರ್ಜಿಯ ಜೊತೆಗೆ ಅರ್ಜಿಯ ಎರಡನೇ ಪುಟದಲ್ಲಿ ನೀಡಿರುವ ಎಲ್ಲಾ ದಾಖಲೆಗಳನ್ನು ಲಗತ್ತಿಸಿ ವಿದ್ಯಾರ್ಥಿನಿಲಯದ ಕಚೇರಿಗೆ ಸಲ್ಲಿಸುವುದು. ಎಲ್ಲವೂ ಸರಿಯಾಗಿದೆ ಎಂದು ದೃಢಪಡಿಸಿಕೊಂಡ ನಂತರ ನಿಲಯಪಾಲಕರ ಅನುಮತಿಯ ಮೇರೆಗೆ ಪ್ರವೇಶ ಶುಲ್ಕವನ್ನು ಅರ್ಜಿ ಶುಲ್ಕವನ್ನು ಪಾವತಿಸಿದ ರೀತಿಯಲ್ಲಿ ಪಾವತಿಸುವುದು.
7. ಪ್ರವೇಶ ಶುಲ್ಕವನ್ನು ಪಾವತಿಸಿದ ನಂತರ ಅದರ ರಶೀತಿಯನ್ನು ವಿದ್ಯಾರ್ಥಿನಿಲಯದ ಕಚೇರಿಗೆ ಸಲ್ಲಿಸಿ ತಾವು ಯಾವ ದಿನಾಂಕದಂದು ವಿದ್ಯಾರ್ಥಿನಿಲಯಕ್ಕೆ ವಾಸಕ್ಕಾಗಿ ಬರುತ್ತೇವೆಂದು ತಿಳಿಸಿ ತಮಗೆ ನಿಯೋಜಿಸಿದ ಕೊಠಡಿ ಸಂಖ್ಯೆಯನ್ನು ತಿಳಿದುಕೊಳ್ಳುವುದು.
8. ವಿದ್ಯಾರ್ಥಿನಿಲಯದ ಕಚೇರಿಯಿಂದ ಪ್ರವೇಶಾತಿ ದೃಢೀಕರಣವನ್ನು ಪಡೆದುಕೊಳ್ಳುವುದು. ಅಧಿಕೃತ ಗುರುತಿನ ಚೀಟಿ ನೀಡುವ ತನಕ ಪ್ರವೇಶಾತಿ ದೃಢೀಕರಣವೇ ಗುರುತಿನ ಚೀಟಿಯಾಗಿರುತ್ತದೆ. ವಿದ್ಯಾರ್ಥಿನಿಲಯವನ್ನು ಪ್ರವೇಶಿಸುವಾಗ ಭದ್ರತಾ ಸಿಬ್ಬಂದಿಗೆ ದೃಢೀಕರಣವನ್ನು/ಗುರುತಿನ ಚೀಟಿಯನ್ನು ತೋರಿಸಿ ವಿದ್ಯಾರ್ಥಿನಿಲಯವನ್ನು ಪ್ರವೇಶಿಸುವುದು.

ಕ್ರಮ ಸಂಖ್ಯೆ:

# ತುಮಕೂರು ವಿಶ್ವವಿದ್ಯಾನಿಲಯ

## ಸ್ನಾತಕ ಪದವಿ ಪುರುಷರ (ಪಾವತಿ) ವಿದ್ಯಾರ್ಥಿನಿಲಯ

**ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ಬಿ. ಹೆಚ್. ರಸ್ತೆ, ತುಮಕೂರು**

**2023–24 ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿನಿಲಯದ ಪ್ರವೇಶಕ್ಕಾಗಿ ಅರ್ಜಿ**

| | | |
|---|---|---|
| 1. | ವಿದ್ಯಾರ್ಥಿಯ ಪೂರ್ಣ ಹೆಸರು (ಬಿಡಿ ಅಕ್ಷರಗಳಲ್ಲಿ ) (ಎಸ್. ಎಸ್. ಎಲ್. ಸಿ. ಅಂಕಪಟ್ಟಿಯಲ್ಲಿ ಇರುವಂತೆ) | |
| 2. | ವಿದ್ಯಾರ್ಥಿಯ ಮೊಬೈಲ್ ಸಂಖ್ಯೆ: | |
| 3. | ಪದವಿ ನೊಂದಣಿ ಸಂಖ್ಯೆ: (ಪ್ರಥಮ ಪದವಿಯ ವಿದ್ಯಾರ್ಥಿಗಳಿಗೆ ನೊಂದಣಿ ಸಂಖ್ಯೆ ನೀಡಿಲ್ಲವಾದಲ್ಲಿ ನೀಡಿದ ಕೂಡಲೆ ಭರ್ತಿಮಾಡುವುದು) | |
| 4. | ತಂದೆ/ತಾಯಿ/ಪೋಷಕರ ಹೆಸರು:<br>ಮೊಬೈಲ್ ಸಂಖ್ಯೆ: | |
| 5. | ಪೂರ್ಣ ವಿಳಾಸ: | |
| 6. | ಹುಟ್ಟಿದ ದಿನಾಂಕ ಹಾಗೂ ವಯಸ್ಸು: | |
| 7. | ಮೀಸಲಾತಿ ಪ್ರವರ್ಗ: | |
| 8. | ಆಧಾರ್ ಸಂಖ್ಯೆ: | |
| 9. | ಪ್ರವೇಶ ಪಡೆದಿರುವ ಕಾಲೇಜು ಮತ್ತು ದಿನಾಂಕ: | ವಿ.ವಿ. ವಿಜ್ಞಾನ ಕಾಲೇಜು<br>ವಿ.ವಿ ಕಲಾ ಕಾಲೇಜು<br>ಸ್ನಾತಕೋತ್ತರ ವಿಭಾಗ : |
| 10. | ಅಧ್ಯಯನ ವರ್ಷ:<br>ಪದವಿ: | |
| 11. | ಹಿಂದಿನ ವರ್ಷದ ತರಗತಿಯಲ್ಲಿ ಉತ್ತೀರ್ಣವಾಗಿರುವ ಶ್ರೇಣಿ, ಪಡೆದ ಅಂಕಗಳು ಮತ್ತು ಶೇಕಡ (%): | |
| 12. | ತುಮಕೂರು ನಗರ/ಹತ್ತಿರದಲ್ಲಿ ವಾಸವಿರುವ ಸಂಬಂಧಿಕರ ಹೆಸರು ಮತ್ತು ಮೊಬೈಲ್ ಸಂಖ್ಯೆ: | |
| 13. | ಮೂಲ ವಾಸಸ್ಥಳದಿಂದ ಕಾಲೇಜಿಗಿರುವ ದೂರ (ಕಿ. ಮೀ.): | |
| 14. | ವಿದ್ಯಾರ್ಥಿನಿಲಯದ ಅರ್ಜಿ ಶುಲ್ಕ ರೂ. 100/– ರ ರಶೀದಿ ಸಂಖ್ಯೆ:<br>ದಿನಾಂಕ: | |

**ಮೇಲೆ ನೀಡಲಾದ ಎಲ್ಲಾ ಮಾಹಿತಿಯು ಸರಿಯಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ**

**ವಿದ್ಯಾರ್ಥಿಯ ಸಹಿ**

**ಕಚೇರಿ ಉಪಯೋಗಕ್ಕೆ**

| | | |
|---|---|---|
| 1. | ವಿದ್ಯಾರ್ಥಿನಿಲಯದ ಪ್ರವೇಶಕ್ಕಾಗಿ<br>ಜಮಾ ಮಾಡಿರುವ ಪ್ರವೇಶ ಶುಲ್ಕದ ಮೊತ್ತ:<br>ರಶೀದಿ ಸಂಖ್ಯೆ:<br>ದಿನಾಂಕ: | |
| 2. | ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆದ ದಿನಾಂಕ: | |
| 3. | ನಿಯೋಜಿಸಿದ ಕೊಠಡಿ ಸಂಖ್ಯೆ: | |
| 4. | ಇನ್ನಿತರೆ ಮಾಹಿತಿ: | |

ನಿಲಯಪಾಲಕರ ಸಹಿ ಮತ್ತು ಮೊಹರು

**ಅರ್ಜಿಯೊಂದಿಗೆ ಲಗತ್ತಿಸಬೇಕಾದ ಪ್ರಮಾಣ ಪತ್ರಗಳ ಪ್ರತಿಗಳು**

1. ಹಿಂದಿನ ವರ್ಷದ ಅಂಕಪಟ್ಟಿ (ಗಳು).
2. ಪ್ರಸ್ತುತ ಕಾಲೇಜಿನ ಗುರುತಿನ ಚೀಟಿ. ಕಾಲೇಜಿನಿಂದ ಗುರುತಿನ ಚೀಟಿ ಇನ್ನೂ ನೀಡಿಲ್ಲವಾದಲ್ಲಿ ಕಾಲೇಜಿನ ಪ್ರವೇಶ ಪಡೆದ ಶುಲ್ಕದ ರಶೀದಿ.
3. ಇತ್ತೀಚಿನ ಎರಡು ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳು.
4. ವಿದ್ಯಾರ್ಥಿಯ ಆಧಾರ್ ಪ್ರತಿ.
5. ವಿದ್ಯಾರ್ಥಿಯ ಗುಣ ಮತ್ತು ನಡತೆಯ ಬಗ್ಗೆ ಹಿಂದಿನ ಕಾಲೇಜಿನಿಂದ ಪಡೆದ ಪತ್ರ (ಹೊಸ ವಿದ್ಯಾರ್ಥಿಗಳಿಗೆ ಮಾತ್ರ).
6. ವಿದ್ಯಾರ್ಥಿನಿಲಯಕ್ಕೆ ಆನ್ ಲೈನ್ ಮೂಲಕ ಪಾವತಿಸಿರುವ ಅರ್ಜಿ ಶುಲ್ಕದ (ರೂ. 100/– ಮಾತ್ರ) ರಶೀದಿ.
7. ಕಾಲೇಜಿಗೆ ಅಥವಾ ಸ್ನಾತಕೋತ್ತರ ವಿಭಾಗಕ್ಕೆ ಪ್ರವೇಶ ಪಡೆದುದನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಅಥವಾ ವಿಭಾಗದ ಅಧ್ಯಕ್ಷರು ದೃಢೀಕರಿಸುವ ಶಿಫಾರಸ್ಸು ಪತ್ರ.
8. ವಿದ್ಯಾರ್ಥಿನಿಲಯದ ನಿಯಮ ಹಾಗೂ ನಿಬಂಧನೆಗಳನ್ನು ಓದಿ, ಒಪ್ಪಿ ವಿದ್ಯಾರ್ಥಿಗಳು ಹಾಗೂ ಪೋಷಕರು ಸಹಿ ಮಾಡಿದ ಪ್ರಮಾಣ ಪತ್ರ.

# <u>ವಿದ್ಯಾರ್ಥಿನಿಲಯದ ನಿಮಯ ಹಾಗೂ ನಿಬಂಧನೆಗಳು</u>

1. ಸ್ನಾತಕ ಪದವಿ ಪುರುಷರ (ಪಾವತಿ) ವಿದ್ಯಾರ್ಥಿನಿಲಯವು ಸಂಪೂರ್ಣವಾಗಿ ಸ್ವಯಂ ಪಾವತಿ (self financed) ಆಧಾರದ ಮೇಲೆ ನಡೆಯುತ್ತದೆ. ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಪ್ರವೇಶಕ್ಕೆ ಅನುಮತಿ ಕೊಡುವುದು ಅಥವಾ ನಿರಾಕರಿಸುವುದು ವಿದ್ಯಾರ್ಥಿನಿಲಯ ಮೇಲ್ವಿಚಾರಣಾ ಸಮಿತಿಯ ಅಂತಿಮ ತೀರ್ಮಾನಕ್ಕೆ ಸೇರುತ್ತದೆ.
2. ಆಯ್ಕೆಯಾದ ವಿದ್ಯಾರ್ಥಿಗಳು ನಿಲಯಕ್ಕೆ ಪ್ರವೇಶ ಪಡೆಯುವಾಗ ನಿಗದಿತ ಶುಲ್ಕವನ್ನು ಸಂಪೂರ್ಣವಾಗಿ ಪಾವತಿಸಬೇಕಾಗಿರುತ್ತದೆ. ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ಬರುವ ಖರ್ಚುಗಳನ್ನು (ವಿದ್ಯುತ್, ನೀರು, ಭೋಜನ ಮತ್ತು ಇತರೆ) ವಿದ್ಯಾರ್ಥಿಗಳಿಗೆ ಸಮಾನವಾಗಿ ಹಂಚಲಾಗುವುದು. ಹಂಚಿಕೆ ಹಣವನ್ನು ಪಾವತಿ ಮಾಡಿರುವ ಹಣದಲ್ಲಿ ಕಡಿತಗೊಳಿಸಲಾಗುವುದು. ಒಂದು ಪಕ್ಷ ಪ್ರತೀ ವಿದ್ಯಾರ್ಥಿಯ ವಾರ್ಷಿಕ ಖರ್ಚು ಸದರಿ ಹಣವನ್ನು ಮೀರಿದ್ದಲ್ಲಿ, ಹೆಚ್ಚುವರಿ ವೆಚ್ಚವನ್ನು ವಿದ್ಯಾರ್ಥಿಗಳು ಪಾವತಿಸಬೇಕಾಗುತ್ತದೆ.
3. ಪ್ರವೇಶ ಪಡೆದ ದಿನದಿಂದ 6 ತಿಂಗಳೊಳಗಾಗಿ ವಿದ್ಯಾರ್ಥಿಯು ವಿದ್ಯಾರ್ಥಿನಿಲಯವನ್ನು ಬಿಟ್ಟರೆ ರೂ 1200/– ಗಳ ದಂಡವನ್ನು ಭರಿಸಬೇಕಾಗುತ್ತದೆ ಅಲ್ಲದೇ ಮುಂಗಡ ಹಣವನ್ನು ಶೈಕ್ಷಣಿಕ ವರ್ಷದ ನಂತರ ಹಿಂತಿರುಗಿಸಲಾಗುವುದು.
4. ವಿದ್ಯಾರ್ಥಿನಿಲಯಕ್ಕೆ ಹೊರಗಿನವರನ್ನು ಕರೆತರುವಂತಿಲ್ಲ. ಹಾಗೇನಾದರು ಹೊರಗಿನವರನ್ನು ಕರೆತಂದ ಸಂದರ್ಭಗಳಲ್ಲಿ ಸದರಿ ವಿದ್ಯಾರ್ಥಿಗಳು ರೂ. 1000/– ರೂಗಳ ದಂಡವನ್ನು ಭರಿಸಬೇಕಾಗುತ್ತದೆ ಮತ್ತು ಅಂತಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದಲ್ಲಿ ನೀಡಿರುವ ಪ್ರವೇಶಾತಿಯನ್ನು ರದ್ದುಪಡಿಲಾಗುವುದು.
5. ವಿದ್ಯಾರ್ಥಿಗಳು ತಮ್ಮ ವಸ್ತುಗಳಿಗೆ ತಾವುಗಳೇ ಜವಾಬ್ದಾರರಾಗಿರುತ್ತಾರೆ ಹಾಗೂ ತಮ್ಮ ವಸ್ತುಗಳಿಗೆ ವಿದ್ಯಾರ್ಥಿನಿಲಯದ ಅಧಿಕಾರಿಗಳು ಜವಾಬ್ದಾರರಾಗಿರುವುದಿಲ್ಲ.
6. ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯನ್ನು ಧರಿಸಿ, ಸ್ವಸಹಾಯ ಪದ್ಧತಿಯಲ್ಲಿ, ನಿಗದಿತ ಸಮಯದಲ್ಲಿ (ಬೆಳಗಿನ ಉಪಹಾರ: 7.30 ರಿಂದ 9.00 ರ ವರೆಗೆ; ಮದ್ಯಾಹ್ನದ ಊಟ: 12.30 ರಿಂದ 2.30 ರ ವರೆಗೆ; ಹಾಗೂ ರಾತ್ರಿ ಊಟ: 7.30 ರಿಂದ 8.30 ರ ವರೆಗೆ) ಭೋಜನಾಲಯದಲ್ಲಿ ಮಾತ್ರ ಆಹಾರ ಸ್ವೀಕರಿಸಬಹುದಾಗಿರುತ್ತದೆ. ಆಹಾರವನ್ನು ತಮ್ಮ ಕೊಠಡಿಗೆ ತೆಗೆದುಕೊಂಡು ಹೋಗಲು ಅವಕಾಶವಿರುವುದಿಲ್ಲ. ಕೊಠಡಿಗೆ ತೆಗೆದುಕೊಂಡು ಹೋದಲ್ಲಿ ಅಥವಾ ಹೊರಗಿನವರಿಗೆ ಸರಬರಾಜು ಮಾಡಿದಲ್ಲಿ ಸೂಕ್ತ ದಂಡ ತೆರಬೇಕಾಗುತ್ತದೆ.
7. ವಿದ್ಯಾರ್ಥಿನಿಲಯದಲ್ಲಿ ವಿದ್ಯುತ್ ಅಥವಾ ಗ್ಯಾಸ್ ಸ್ಟವ್ ಗಳನ್ನು ಇಟ್ಟುಕೊಳ್ಳುವ ಹಾಗಿಲ್ಲ ಹಾಗೂ ಯಾವುದೇ ಅಡುಗೆಯನ್ನು ಸ್ವತ: ಕೋಠಡಿಗಳಲ್ಲಿ ಮಾಡುವಂತಿಲ್ಲ. ಹಾಗೇನಾದರು ಇಟ್ಟುಕೊಂಡಿರುವ/ಬಳಸುವ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಕೂಡಲೇ ರದ್ದುಪಡಿಸಲಾಗುವುದು ಹಾಗೂ ಅಂತಹ ವಿಚಾರ ತಿಳಿದಿದ್ದರೂ ವಿದ್ಯಾರ್ಥಿನಿಲಯದ ಆಡಳಿತದ ಗಮನಕ್ಕೆ ತರದ ಕೋಠಡಿಯ ಇನ್ನುಳಿದ ವಿದ್ಯಾರ್ಥಿಗಳಿಗೆ ಕೂಡ ಸೂಕ್ತ ದಂಡ ವಿಧಿಸಲಾಗುವುದು.
8. ಅನುಮತಿ ಇಲ್ಲದೆ ದಾಸ್ತಾನು ಕೊಠಡಿ/ಅಡುಗೆ ಕೊಠಡಿಗಳಿಗೆ ಪ್ರವೇಶವಿರುವುದಿಲ್ಲ.
9. ವಿದ್ಯಾರ್ಥಿಗಳು ತಮ್ಮ ಕೊಠಡಿಯಲ್ಲಿ ಹಾಗೂ ವಿದ್ಯಾರ್ಥಿನಿಲಯದಲ್ಲಿ ಸ್ವಚ್ಚತೆ ಕಾಪಾಡಿಕೊಳ್ಳತಕ್ಕದ್ದು. ಮುಂದುವರೆದು, ವಿದ್ಯಾರ್ಥಿನಿಲಯದ ಸ್ವಚ್ಚತೆ ಮತ್ತು ಇನ್ನಿತರ ಕೆಲಸಗಳಿಗಾಗಿ ವಾರಕ್ಕೆ ಕನಿಷ್ಠ ಎರಡು ಗಂಟೆಗಳ ಶ್ರಮದಾನ ಮಾಡುವುದು. ವಿದ್ಯಾರ್ಥಿನಿಲಯದಲ್ಲಿ ಆಯೋಜಿಸುವ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು.
10. ವಿದ್ಯಾರ್ಥಿಗಳು ರಜೆಯ ಮೇಲೆ ಹೋಗುವಾಗ ನಿಲಯಪಾಲಕರಿಗೆ ರಜೆ ಪತ್ರವನ್ನು ನೀಡಿ ಹೋಗಬೇಕಾಗಿರುತ್ತದೆ.
11. ಅನಾರೋಗ್ಯದ ಸಂದರ್ಭಗಳಲ್ಲಿ, ಕಾಲೇಜು/ವಿಭಾಗಗಳು ಆಯೋಜಿಸುವ ಕ್ಯಾಂಪ್ ಗಳಲ್ಲಿ ಭಾಗವಹಿಸುವ ಸಂದರ್ಭಗಳಲ್ಲಿ ಅಥವಾ ವಿಶ್ವವಿದ್ಯಾನಿಲಯದಿಂದ ಘೋಷಿಸುವ ರಜೆಯ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ (ಏಳು ದಿನಗಳಿಗಿಂತ ಹೆಚ್ಚು ದಿನ ಹೋದಾಗ ಮಾತ್ರ) ಮಾಹೆಯಾನ ಬರುವ ವೆಚ್ಚದಲ್ಲಿ ರಜೆಯ ಅವಧಿಗೆ ಹಂಚಿಕೆ ಮಾಡುವುದಿಲ್ಲ. ಇನ್ನುಳಿದ ಯಾವುದೇ ರೀತಿಯ ಗೈರು ಹಾಜರಿಗೆ ವೆಚ್ಚದಲ್ಲಿನ ವಿನಾಯಿತಿ ಇರುವುದಿಲ್ಲ.
12. ವಿದ್ಯಾರ್ಥಿಗಳು ಹೋಗುವ/ಬರುವ ದಿನಾಂಕ ಹಾಗೂ ಸಮಯವನ್ನು ಭದ್ರತಾ ಸಿಬ್ಬಂದಿಯ ಹತ್ತಿರ ಇರುವ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

ಶ್ರೀ ________________________ ಆದ ನಾನು ಹಾಗೂ ನನ್ನ ಮಗ ಈ ಮೇಲ್ಕಂಡ ಅಂಶಗಳನ್ನೆಲ್ಲಾ ಓದಿ ಸರಿ ಎಂದು ತಿಳಿದು ಒಪ್ಪಿಗೆಯೊಂದಿಗೆ ರುಜು ಮಾಡಿರುತ್ತೇವೆ. ನನ್ನ ಮಗನ ನಡವಳಿಗೆಗೆ ನಾನು ಜವಾಬ್ದಾರನಾಗಿರುತ್ತೇನೆ. ನನ್ನ ಮಗನ ಮೇಲೆ ಕೈಗೊಳ್ಳುವ ಎಲ್ಲಾ ರೀತಿಯ ಶಿಸ್ತಿನ ಕ್ರಮಕ್ಕೂ ನಾನು ಸಂಪೂರ್ಣವಾಗಿ ಬದ್ಧನಾಗಿರುತ್ತೇನೆ.

ವಿದ್ಯಾರ್ಥಿಯ ಸಹಿ　　　　　　　　　　ತಂದೆ/ತಾಯಿ/ಪೋಷಕರ ಸಹಿ

ದಿನಾಂಕ:

**ಪದವಿ ಪ್ರವೇಶಾತಿ ದೃಢೀಕರಣ ಪ್ರಮಾಣ ಪತ್ರ**

______________________________ (ನೊಂದಣಿ ಸಂಖ್ಯೆ: ____________________) ಎಂಬ ವಿದ್ಯಾರ್ಥಿ 2023–24 ನೇ ಶೈಕ್ಷಣಿಕ ಸಾಲಿನಲ್ಲಿ ______________________________ ಕಾಲೇಜಿನಲ್ಲಿ _______________ ತರಗತಿಯಲ್ಲಿ ಪ್ರವೇಶ ಪಡೆದಿರುತ್ತಾನೆ ಹಾಗೂ ____________________ ವಿಷಯಗಳನ್ನು ಅಧ್ಯಯನ ಮಾಡುತ್ತಿರುತ್ತಾನೆ. ಸದರಿ ವಿದ್ಯಾರ್ಥಿಗೆ ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ಪುರುಷರ (ಪಾವತಿ) ವಿದ್ಯಾರ್ಥಿನಿಲಯಕ್ಕೆ ಪ್ರವೇಶಾತಿ ನೀಡಬೇಕೆಂದು ಶಿಫಾರಸ್ಸು ಮಾಡಲಾಗಿದೆ.

**ಪ್ರಾಂಶುಪಾಲರ ಸಹಿ ಮತ್ತು ಮೊಹರು**

## ರ್‍ಯಾಗಿಂಗ್ ಚಟುವಟಿಕೆ ನಿಷೇಧಿಸುವ ಸಂಬಂಧ ತಂದೆ/ತಾಯಿ/ಪೋಷಕರ ಮುಚ್ಚಳಿಕೆ ಪತ್ರ

ಶ್ರೀ/ಶ್ರೀಮತಿ ______________________________ ಆದ ನಾನು ______________________________ ಎಂಬ ವಿದ್ಯಾರ್ಥಿಯ ತಂದೆ/ತಾಯಿ/ಪೋಷಕರಾಗಿದ್ದೂ, ನಾನು ಹಾಗೂ ನನ್ನ ಮಗ ರ್‍ಯಾಗಿಂಗ್ ಚಟುವಟಿಕೆ ನಿಷೇಧಿಸುವ ಕಾನೂನುಗಳು ಹಾಗೂ ಈ ಸಂಬಂಧ ಸರ್ವೋಚ್ಚ ನ್ಯಾಯಾಲಯ ಮತ್ತು ಕೇಂದ್ರ/ರಾಜ್ಯ ಸರ್ಕಾರಗಳ ನಿರ್ದೇಶನಗಳನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿರುತ್ತೇವೆ.. ತತ್ಸಂಬಂಧದ ಯು.ಜಿ.ಸಿ. ನಿಯಮಗಳನ್ನೂ ಸಹ ಅರ್ಥ ಮಾಡಿಕೊಂಡಿರುತೇವೆ. ನನ್ನ ಮಗ ಯಾವುದೇ ರ್‍ಯಾಗಿಂಗ್ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಿಲ್ಲವೆಂದು ಹಾಗೂ ಒಂದು ವೇಳೆ ಪಾಲ್ಗೊಂಡಲ್ಲಿ ಅವನ ವಿರುದ್ಧ ಯು.ಜಿ.ಸಿ. ನಿಯಮಾನುಸಾರ ಯಾವುದೇ ಶಿಕ್ಷೆ ವಿಧಿಸಿದರೂ ಬದ್ಧವಾಗಿರುವುದಾಗಿ ಈ ಮೂಲಕ ಒಪ್ಪಿ ಸಹಿ ಮಾಡಿರುತ್ತೇವೆ.

ವಿದ್ಯಾರ್ಥಿಯ ಸಹಿ

ತಂದೆ/ತಾಯಿ/ಪೋಷಕರ ಸಹಿ

ಮೊಬೈಲ್ ಸಂಖ್ಯೆ:

ಹೆಸರು ಮತ್ತು ವಿಳಾಸ: